O.S.No.419/2017
PW -1

ದಿನಾಂಕ 09/12/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಮುಂದುವರೆ ಪಾಟೀ ಸವಾಲು:- ಶ್ರೀ ಪಿ.ಸಿ.ಕೆ.ಆರ್. ಪ್ರತಿವಾದಿ ಪರ ವಕೀಲರಿಂದ**

ಗೊಪಾಲಪ್ಪ 2008 ರಲ್ಲಿ ಮೃತಪಟ್ಟಿರುತ್ತಾರೆ. ಸದರಿಯವರು 25 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಿಟ್ಟಪ್ಪ ಇವರು 22 ವರ್ಷಗಳಿಂದ ದೇಶಾಂತರ ಹೋಗಿರುತ್ತಾರೆ. ಅವರು ದೇಶಾಂತರ ಹೋಗಿದ ಬಗ್ಗೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಕಿಟ್ಟಪ್ಪ ನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿ ಗೋಪಾಲಪ್ಪ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ನಾವು 2017 ರಲ್ಲಿ ಕೇಳಿರುತ್ತೇವೆ ಅದಕ್ಕಿಂತ ಪೂರ್ವದಲ್ಲಿ ಕೇಳಿರುವುದಿಲ್ಲ ಎಂದರೆ ಸರಿ. ಗೊಪಾಲಪ್ಪ ತೀರಿಕೊಂಡ ನಂತರ ಅವರ ಮಗನಿಗೆ ಪೌವತಿ ವಾರಸು ಮೇಲೆ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿ ಮುಂದೆ ಕೊಡುತ್ತೇನೆಂದು ಹೇಳಿರುತ್ತಾರೆಂದು ಉತ್ತರಿಸಿರುತ್ತಾರೆ. ಖಾತೆ ಪಹಣಿ ಆದ ಸಂಬಂಧ ನಾನು ಕಂದಾಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ಮುಂದೆ ಆಸ್ತಿ ಕೊಡುವ ಬಗ್ಗೆ ಯಾವುದೇ ಬರವಣಿಗೆ ಮಾಡಿಕೊಂಡಿರುವುದಿಲ್ಲ ಹಾಗೂ ಆ ಸಂಬಂಧ ಯಾವುದೇ ದಾಖಲೆಗಳು ಇರುವುದಿಲ್ಲ.

2. ಪ್ರತಿವಾದಿಗೆ ವಕೀಲರ ಮುಖಾಂತರ ಭಾಗ ಕೊಡುವಂತೆ ನೋಟೀಸು ಕಳುಹಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಬಗ್ಗೆ ಯಾವುದೇ ನ್ಯಾಯ ಪಂಚಾಯಿತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾವು ಕಂದಾಯ ಕಟ್ಟಿರುವುದಿಲ್ಲ ಎಂದರೆ ಸರಿ. ನಮ್ಮ ಜಮೀನುಗಳಿಗೆ ಖಾತೆ ಮತ್ತು ಕಂದಾಯ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಂದೆ ಇದ್ದ ಕಾಲಕ್ಕೆ ಭಾಗ ಬೇಕು

ಎಂದು ಕೇಳಿರುವ ಬಗ್ಗೆ ನಮಗೆ ಹೇಳುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆ ದಾವಾ ಆಸ್ತಿ ಸಂಬಂಧ ಭಾಗ ಬೇಕು ಎಂದು ಯಾವುದೇ ಕೇಸು ಹಾಕಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಗೊಪಾಲಪ್ಪ ಖರೀದಿಸುವ ಕಾಲಕ್ಕೆ ನಾವು ಜಂಟಿಯಾಗಿ ಖರೀದಿಸಿದ ಬಗ್ಗೆ ನಮೂದು ಇರುವುದಿಲ್ಲ. ಗೊಪಾಲಪ್ಪ ಕ್ರಯಕ್ಕೆ ಮಾಡಿಕೊಳ್ಳುವ ಕಾಲಕ್ಕೆ ನಮಗೂ ಭಾಗ ಇದೆ ಎಂದು ಕೇಳಿರುತ್ತೀರಾ ಎಂದರೆ ಸಾಕ್ಷಿ ಬೇರೆಯವರಿಗೆ ಮಾರಾಟ ಮಾಡಲು ಹೋದಾಗ ನಾವು ತಕರಾರು ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಯಾರಿಗೆ ಮಾರಾಟ ಮಾಡಲು ಹೋಗುತ್ತಿದ್ದರು ಎಂದು ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಅಕ್ರಮವಾಗಿ ದಾವಾ ಆಸ್ತಿಯನ್ನು ಹೊಡೆಯಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಗಳಿಗೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಆಗಲೀ ಉಳಿದ ವಾದಿಗಳಿಗೆ ಆಗಲೀ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ